ಕರ್ನಾಟಕ ಸರ್ಕಾರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012
ದೂರವಾಣಿ: 080–23460460 (5 ಲೈನ್‌ಗಳು) ಫ್ಯಾಕ್ಸ್: 080–23461576
ಇಮೇಲ್: keauthority-ka@nic.in ವೆಬ್‌ಸೈಟ್: http://kea.kar.nic.in

ಸಂಖ್ಯೆ : ಇಡಿ/ಕೆಇಎ/ಆಡಳಿತ/ಸಿ.ಆರ್.–09/2015–16 **ದಿನಾಂಕ : 17.12.2016**

ಅಧಿಸೂಚನೆ–1

ಎನ್.ಸಿ.ಸಿ. ನಿರ್ದೇಶನಾಲಯ (ರಾಜ್ಯಕೋಶ) ಬೆಂಗಳೂರು ಮತ್ತು ರಾಜ್ಯದ ವ್ಯಾಪ್ತಿಯಲ್ಲಿ ಖಾಲಿ ಇರುವ ಲಸ್ಕರ್ (ಗ್ರೂಪ್ 'ಡಿ') ಹುದ್ದೆಗಳ ನೇರ ನೇಮಕಾತಿ

ಸರ್ಕಾರದ ಪತ್ರ ಸಂಖ್ಯೆ ಇಡಿ 36 ರಾಯುಸೇ 2014, ದಿನಾಂಕ 24.06.2015ರ ಅನ್ವಯ ಎನ್.ಸಿ.ಸಿ. ನಿರ್ದೇಶನಾಲಯ (ರಾಜ್ಯಕೋಶ) ಇವರು ತಮ್ಮ ಪತ್ರ ಸಂಖ್ಯೆ: ಎಸ್.1.ಎನ್.ಸಿ.ಇ./140/ನೇಮಕಾತಿ 14–15 ದಿನಾಂಕ 25.10.2016, 08.11.2016, 16.11.2016, 05.12.2016ರಲ್ಲಿ ಖಾಲಿ ಇರುವ ಲಸ್ಕರ್ (ಗ್ರೂಪ್ 'ಡಿ') ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವನ್ನು ಕೋರಿರುತ್ತಾರೆ. Karnataka Directorate of National Cadet Corps (Cadre and Recruitment) Rules 2003 ಅನ್ವಯ ಲಸ್ಕರ್ (ಗ್ರೂಪ್ 'ಡಿ') ಹುದ್ದೆಗಳನ್ನು ನೇರ ನೇಮಕಾತಿ ಮಾಡುವ ಸಂಬಂಧ ಎಸ್.ಎಸ್.ಎಲ್.ಸಿ/ 10ನೇ ತರಗತಿ / ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಕನ್ನಡ ವಿಷಯವನ್ನು ಒಂದು ಭಾಷೆಯನ್ನಾಗಿ ಅಭ್ಯಸಿಸಿರುವ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಹತಾ ಪರೀಕ್ಷೆಯಲ್ಲಿ ಅಂದರೆ ಎಸ್.ಎಸ್.ಎಲ್.ಸಿ. / 10ನೇ ತರಗತಿ / ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ನೇಮಕಾತಿ ಮಾಡಲಾಗುವುದು. (ಸ್ಪರ್ಧಾತ್ಮಕ ಪರೀಕ್ಷೆ ಇರುವುದಿಲ್ಲ)

ವೇತನ ಶ್ರೇಣಿ : 9,600–14,550

ಒಟ್ಟು ಹುದ್ದೆಗಳು : 82 – ಪ್ರವರ್ಗವಾರು ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.inನಲ್ಲಿ ನೀಡಲಾಗಿದೆ.

ಸಂಖ್ಯೆ : ಇಡಿ/ಕೆಇಎ/ಆಡಳಿತ/ಸಿ.ಆರ್.–09/(ಹೆಚ್.ಕೆ.)/2015–16 **ದಿನಾಂಕ : 17.12.2016**

ಅಧಿಸೂಚನೆ–2

ಎನ್.ಸಿ.ಸಿ. ನಿರ್ದೇಶನಾಲಯ (ರಾಜ್ಯಕೋಶ) ಬೆಂಗಳೂರು ಮತ್ತು ರಾಜ್ಯದ ವ್ಯಾಪ್ತಿಯಲ್ಲಿ ಖಾಲಿ ಇರುವ ಲಸ್ಕರ್ (ಗ್ರೂಪ್ 'ಡಿ') ಹುದ್ದೆಗಳ ನೇರ ನೇಮಕಾತಿ (ಹೈದರಾಬಾದ್ ಕರ್ನಾಟಕ ಪ್ರದೇಶದ ಹುದ್ದೆಗಳಿಗೆ – ಸ್ಥಳೀಯ ವೃಂದ)

ಸರ್ಕಾರದ ಪತ್ರ ಸಂಖ್ಯೆ ಇಡಿ 36 ರಾಯುಸೇ 2014, ದಿನಾಂಕ 24.06.2015ರ ಅನ್ವಯ ಎನ್.ಸಿ.ಸಿ. ನಿರ್ದೇಶನಾಲಯ (ರಾಜ್ಯಕೋಶ) ಇವರು ತಮ್ಮ ಪತ್ರ ಸಂಖ್ಯೆ: ಎಸ್.1.ಎನ್.ಸಿ.ಇ./140/ನೇಮಕಾತಿ 14–15 ದಿನಾಂಕ 25.10.2016, 08.11.2016, 16.11.2016, 05.12.2016ರಲ್ಲಿ ಖಾಲಿ ಇರುವ ಲಸ್ಕರ್ (ಗ್ರೂಪ್ 'ಡಿ') ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವನ್ನು ಕೋರಿರುತ್ತಾರೆ. Karnataka Directorate of National Cadet Corps (Cadre and Recruitment) Rules 2003 ಅನ್ವಯ ಲಸ್ಕರ್ (ಗ್ರೂಪ್ 'ಡಿ') ಹುದ್ದೆಗಳನ್ನು ನೇರ ನೇಮಕಾತಿ ಮಾಡುವ ಸಂಬಂಧ ಎಸ್.ಎಸ್.ಎಲ್.ಸಿ / 10ನೇ ತರಗತಿ / ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಕನ್ನಡ ವಿಷಯವನ್ನು ಒಂದು ಭಾಷೆಯನ್ನಾಗಿ ಅಭ್ಯಸಿಸಿರುವ ಅರ್ಹ ಹೈದರಾಬಾದ್ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಹತಾ ಪರೀಕ್ಷೆಯಲ್ಲಿ ಅಂದರೆ, ಎಸ್.ಎಸ್.ಎಲ್.ಸಿ. / 10ನೇ ತರಗತಿ / ತತ್ಸಮಾನ ಪರೀಕ್ಷೆಯಲ್ಲಿ ಅರ್ಹ ಅಭ್ಯರ್ಥಿಗಳು ಪಡೆದ ಅಂಕಗಳ ಆಧಾರದ ಮೇಲೆ ನೇಮಕಾತಿ ಮಾಡಲಾಗುವುದು. (ಸ್ಪರ್ಧಾತ್ಮಕ ಪರೀಕ್ಷೆ ಇರುವುದಿಲ್ಲ)

ವೇತನ ಶ್ರೇಣಿ : 9,600–14,550

ಒಟ್ಟು ಹುದ್ದೆಗಳು : 02 – ಪ್ರವರ್ಗವಾರು ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.inನಲ್ಲಿ ನೀಡಲಾಗಿದೆ.

ಎರಡೂ ಅಧಿಸೂಚನೆಗಳಿಗೆ ಸಾಮಾನ್ಯ ಸೂಚನೆಗಳು

1. **ವಯೋಮಿತಿ :** ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಕನಿಷ್ಠ 18 ವರ್ಷಗಳು ತುಂಬಿರತಕ್ಕದ್ದು ಹಾಗೂ ಈ ಕೆಳಕಂಡ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.

1) ಸಾಮಾನ್ಯ ಅರ್ಹತೆ	–	35 ವರ್ಷಗಳು
2) ಪ್ರವರ್ಗ–2ಎ / 2ಬಿ / 3ಎ / 3ಬಿ	–	38 ವರ್ಷಗಳು
3) ಪರಿಶಿಷ್ಟಜಾತಿ / ಪರಿಶಿಷ್ಟ ಪಂಗಡ / ಪ್ರವರ್ಗ–1	–	40 ವರ್ಷಗಳು

ನೇಮಕಾತಿಯ ಗರಿಷ್ಠ ವಯೋಮಿತಿಯನ್ನು ಮಾಜಿ ಸೈನಿಕರು, ಈಗಾಗಲೇ ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು, ಎನ್.ಸಿ.ಸಿ ಪರಿವೀಕ್ಷಕರು, ಗ್ರಾಮ ಸಮೂಹ ಪರಿಶೀಲಕರು, ಜೀತ ಕಾರ್ಮಿಕರು, ಜನಗಣತಿ, ವಿಧವೆ ಮತ್ತು ವಿಕಲಚೇತನ ಅಭ್ಯರ್ಥಿಗಳಿಗೆ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ಅಧಿನಿಯಮ (3)ರ ನಿಯಮ 6ರಲ್ಲಿ ನಿಗದಿಪಡಿಸಿರುವಂತೆ ನಿಗದಿತ ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುವುದು.

2. **ಶೈಕ್ಷಣಿಕ ಅರ್ಹತೆ :**
   (ಅ) ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. / 10ನೇ ತರಗತಿ / ತತ್ಸಮಾನ ಪರೀಕ್ಷೆಯಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ತೆಗೆದುಕೊಂಡು ಉತ್ತೀರ್ಣರಾಗಿರಬೇಕು ಮತ್ತು
   (ಆ) ಅಭ್ಯರ್ಥಿಗಳು ಕರ್ನಾಟಕ ಗೃಹ ರಕ್ಷಕ ದಳ ಅಧಿನಿಯಮ 1962ರ ಅಡಿಯಲ್ಲಿ ಗೃಹ ರಕ್ಷಕ ಪಡೆಯ ಸದಸ್ಯನಾಗಿ ಸೇವೆ ಸಲ್ಲಿಸಲೂ ಕೂಡ ಸಿದ್ಧರಿರಬೇಕು.

ಅಂಗವಿಕಲ ಅಭ್ಯರ್ಥಿಗಳಿಗೆ ಅರ್ಹತೆ : ಸರ್ಕಾರದ ಅಧಿಸೂಚನೆ ಸಂಖ್ಯೆ WCD/348/PH8/2015 ದಿನಾಂಕ 17.10.2016ರ ಅನ್ವಯ ಈ ಪ್ರಕಟಣೆಯ ಮೂಲಕ ತುಂಬಲಾಗುವ ಹುದ್ದೆಗಳಲ್ಲಿ Low Vision ಮತ್ತು Hearing impairment ಅಂಗವಿಕಲತೆ ಹೊಂದಿರುವವರು ಮಾತ್ರ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಈ ಅಂಗವಿಕಲತೆಯನ್ನು ಹೊಂದಿದವರನ್ನು ಹೊರತು ಪಡಿಸಿ ಇತರೆ ಅಂಗವಿಕಲತೆ ಹೊಂದಿದವರನ್ನು ನೇಮಕಾತಿಗೆ ಪರಿಗಣಿಸಲು ಅವಕಾಶವಿರುವುದಿಲ್ಲ.

3. **ಅರ್ಜಿ ಸಲ್ಲಿಸುವ ವಿಧಾನ :**
ಪ್ರಾಧಿಕಾರದ ವೆಬ್‌ಸೈಟ್ http://kea.kar.nic.inನಲ್ಲಿ ಅಧಿಸೂಚನೆ 1ಕ್ಕೆ **Recruitment of Group-D** ಲಿಂಕ್ ಅನ್ನು ಆಯ್ಕೆ ಮಾಡಿ ಹಾಗು ಅಧಿಸೂಚನೆ 2ಕ್ಕೆ **Recruitment of Group-D-HK** ಲಿಂಕ್ ಅನ್ನು ಆಯ್ಕೆ ಮಾಡಿ ಆನ್ ಲೈನ್ ಮುಖಾಂತರ ಅರ್ಜಿಯನ್ನು ಭರ್ತಿಮಾಡಬೇಕು. ಪೆನ್ ಮತ್ತು ಪೇಪರ್ ಉಪಯೋಗಿಸಿ ಅರ್ಜಿಯನ್ನು ಸಲ್ಲಿಸುವ ವಿಧಾನ ಇರುವುದಿಲ್ಲ. ಆನ್‌ಲೈನ್ ಮುಖಾಂತರ ಅರ್ಜಿ ಭರ್ತಿ ಮಾಡಲು ವಿವರವಾದ ಮಾಹಿತಿಗಳನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ನೀಡಲಾಗಿದೆ.

ಸೂಚನೆ : ಅಧಿಸೂಚನೆ–1 ಮತ್ತು ಅಧಿಸೂಚನೆ–2ರಲ್ಲಿಯ ಎರಡೂ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಎರಡೂ ಹುದ್ದೆಗಳಿಗೆ ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸಬೇಕು.

ಆನ್‌ಲೈನ್ ಮುಖಾಂತರ ಅರ್ಜಿಸಲ್ಲಿಸಲು ಪ್ರಾರಂಭಿಕ ದಿನಾಂಕ	20.12.2016ರ ಸಂ. 5:30ರಿಂದ
ಆನ್‌ಲೈನ್ ಮುಖಾಂತರ ಅರ್ಜಿಸಲ್ಲಿಸಲು ಕೊನೆಯ ದಿನಾಂಕ	19.01.2017ರ ಸಂ. 5:30ರ ವರೆಗೆ
ಬ್ಯಾಂಕ್ ವೇಳೆಯಲ್ಲಿ ಶುಲ್ಕ ಪಾವತಿ ಮಾಡಲು ಕೊನೆಯ ದಿನಾಂಕ	21.01.2017

4. **ಶುಲ್ಕ :**

ವಿವರಗಳು	ಶುಲ್ಕ
ಸಾಮಾನ್ಯ ಅರ್ಹತೆ	ರೂ. 300/–
ಇತರೆ ಪ್ರವರ್ಗಗಳು (2ಎ, 2ಬಿ, 3ಎ, 3ಬಿ) ಅಭ್ಯರ್ಥಿಗಳು	ರೂ. 150/–
ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1 ರ ಅಭ್ಯರ್ಥಿಗಳು	ರೂ. 100/–
ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದೆ. (ಶೇ.40ಕ್ಕಿಂತ ಹೆಚ್ಚು ಅಂಗವಿಕಲತೆ ಹೊಂದಿರುವವರು ಮತ್ತು ಅದಕ್ಕೆ ಸಂಬಂಧಿಸಿದಂತೆ ಜಿಲ್ಲಾ ವೈದ್ಯಾಧಿಕಾರಿಗಳಿಂದ ಪ್ರಮಾಣ ಪತ್ರ ಹೊಂದಿರುವವರು)	

ಸೂಚನೆ : ಅಧಿಸೂಚನೆ 1 ಮತ್ತು ಅಧಿಸೂಚನೆ 2ರಲ್ಲಿನ ಎರಡೂ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಪ್ರತ್ಯೇಕವಾಗಿ ಶುಲ್ಕವನ್ನು ಪಾವತಿಸಬೇಕು.

5. ಆಯ್ಕೆ ವಿಧಾನ ಮತ್ತು ನೇಮಕಾತಿ ಅರ್ಹತೆ ವಿವರಗಳನ್ನು ಕೆಇಎ ವೆಬ್‌ಸೈಟ್ http://kea.kar.nic.inನಲ್ಲಿ ಪ್ರಕಟಿಸಲಾಗಿದೆ.

ಸೂಚನೆ :

1. **ಎಲ್ಲಾ ಸಂಬಂಧಿಸಿದ ದಾಖಲೆಗಳು / ಅಂಕ ಪಟ್ಟಿಗಳು / ಮೀಸಲಾತಿಯ ಪ್ರಮಾಣಪತ್ರಗಳು ಹಾಗು ಇನ್ನಿತರ ಅವಶ್ಯ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ ಅಥವಾ ಅದಕ್ಕೂ ಮೊದಲಿನ ದಿನಾಂಕದೊಳಗೆ ಅಭ್ಯರ್ಥಿಗಳು ಕಡ್ಡಾಯವಾಗಿ ಪಡೆದಿರಬೇಕು / ಹೊಂದಿರಬೇಕು.**
2. ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957, ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ನಡತೆ) ನಿಯಮ 1966 ಮತ್ತು ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ಪ್ರೊಬೇಷನ್) ನಿಯಮ 1977 ಮತ್ತು ಸರ್ಕಾರಿ ನೌಕರರ ಸೇವಾ ನಿಬಂಧನೆಗಳನ್ನು ನಿಯಂತ್ರಿಸಲು ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ ನಿಯಮ, 1978 (1990ರ ಕರ್ನಾಟಕ ನಿಯಮ 14) ಮತ್ತು ಡಿಪಿಎಆರ್ 19 ಎಸ್‌ಸಿಆರ್ 2006, ದಿನಾಂಕ 14.08.2006ರಲ್ಲಿ ಹೊರಡಿಸಿದ ಕರ್ನಾಟಕ ನಾಗರೀಕ ಸೇವಾ (ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಆಯ್ಕೆ ಮುಖಾಂತರ ಮಾಡಲಾಗುವ ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2006ರಲ್ಲಿ ಗ್ರೂಪ್ ಡಿ ಹುದ್ದೆಗಳ ನೇಮಕಾತಿ ಕುರಿತಂತೆ ವಿವರಿಸಿದ ರೀತಿಯಲ್ಲಿ ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಆಧರಿಸಿ ಹಾಗು ಕಾಲಕಾಲಕ್ಕೆ ಜಾರಿಗೆ ಬಂದಿರುವ ಬಳಕೆಯಲ್ಲಿರುವ ಎಲ್ಲಾ ಕಾಯಿದೆಗಳು ಅವು ನಿಯಮ ಆಶಯಕ್ಕೆ ಅನುಗುಣವಾಗಿಲ್ಲದಿದ್ದಲ್ಲಿ ಹೊರತುಪಡಿಸಿ ಆಯ್ಕೆಯನ್ನು ಮಾಡಲಾಗುವುದು.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು

(ಸಹಾಯವಾಣಿ : 080–23460460 – ಐದು ಲೈನುಗಳು – ಬೆ. 10:30 ರಿಂದ ಸಂ. 6:00ರ ವರೆಗೆ – ಎಲ್ಲಾ ಕೆಲಸದ ದಿನಗಳಲ್ಲಿ)